ಸಾಕ್ಷಿಯನ್ನು ಈಹೊತ್ತು ದಿನಾಂಕ: 19.10.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

ಮುಂದುವರೆದ ಮುಖ್ಯ ವಿಚಾರಣೆ: ಪ್ರತಿವಾದಿ ಪರ ಶ್ರೀ ಕೆ ವಿ ಪಿ ವಕೀಲರಿಂದ:

ಮೂಲ ಮಾಲೀಕ ಹೊಂಬಯ್ಯರವರು ಶಿವಮೂರ್ತಿರವರಿಗೆ ಬರೆದುಕೊಟ್ಟ ಜಿಪಿಎ ದ ದೃಢೀಕೃತ ನಕಲನ್ನು ನಿಡಿ 10 ಎಂದು , ಸದರಿ ಜಿಪಿಎ ಎನ್ ಹೆಚ್ ಶಿವಮೂರ್ತಿ ರವರು ನನಗೆ ದಾವಾ ಆಸ್ತಿ ಬಗ್ಗೆ ಬರೆದುಕೊಟ್ಟ ಮೂಲ ಕ್ರಯಪತ್ರವನ್ನು ನಿಡಿ 11 ಎಂದು , ಎರಡು ಋಣಭಾರ ಪ್ರಮಾಣ ಪತ್ರಗಳನ್ನು ನಿಡಿ 12 ಮತ್ತು 13 ಎಂದು , ಮನೆ ಕಟ್ಟಡಕ್ಕಾಗಿ ಪಡೆದ ಪ್ಲಾನ್ ನ್ನು ನಿಡಿ 14 ಎಂದು , ಮಂಜೂರಾತಿ ಪತ್ರವನ್ನು ನಿಡಿ 15 ಎಂದು , ಖಾತಾ ಪ್ರಮಾಣ ಪತ್ರವನ್ನು ನಿಡಿ 16 ಎಂದು , ಪ್ರಾಪರ್ಟಿ ಎಕ್ಸ್ ಟ್ರಾಕ್ಟ್ ನ್ನು ನಿಡಿ 17 ಎಂದು , ಬೆಸ್ಕಾಂ ರವರ ಒಂದು ಬಿಲ್ ಮತ್ತು ಇನ್ ವಾಯ್ಸ್ ನ್ನು ನಿಡಿ 18 ಮತ್ತು 19 ಎಂದು, ವಾಟರ್ ಕನೆಷನ್ ಅರ್ಜಿಯನ್ನು ನಿಡಿ 20 ಎಂದು , ಸಂಪರ್ಕ ಪಡೆದ ಬಗ್ಗೆ ದಾಖಲೆಯನ್ನು ನಿಡಿ 21 ಎಂದು, ಗೃಹಪ್ರವೇಶದ ಆಮಂತ್ರಣ ಪತ್ರಿಕೆಯನ್ನು ನಿಡಿ 22 ಎಂದು, ಮನೆಯನ್ನು ಬಾಡಿಗೆಗೆ ಕೊಟ್ಟ ಬಗ್ಗೆ ನಾಲ್ಕು ಬಾಡಿಗೆ ಕರಾರು ಪತ್ರಗಳನ್ನು ಕ್ರಮವಾಗಿ ನಿಡಿ 23 ರಿಂದ 26 ಎಂದು , ಪ್ರ . ವ . ವರದಿಯ ನಕಲನ್ನು ದೂರಿನೊಂದಿಗೆ ನಿಡಿ 27 ಎಂದು , ಒಂಭತ್ತು ಬಿಲ್ ಮತ್ತು ರಶೀದಿಗಳನ್ನು ಒಟ್ಟಾಗಿ ನಿಡಿ 28 ಎಂದು , ಸರ್ವೆ

ನಂಬರ್ 23/8 ರ ಜಮೀನಿಗೆ ಸಂಬಂಧಪಟ್ಟಂತೆ ಹನ್ನೊಂದು ಆರ್ ಟಿ ಸಿಗಳನ್ನು ಒಟ್ಟಾಗಿ ನಿಡಿ 29 ಎಂದು , ಸರ್ವೆ ನಂಬರ್ 23/4 ರ ಜಮೀನಿಗೆ ಸಂಬಂಧಪಟ್ಟಂತೆ ಆರು ಆರ್ ಟಿ ಸಿಗಳನ್ನು ಒಟ್ಟಾಗಿ ನಿಡಿ 30 ಎಂದು , ಹೊಂಬಯ್ಯರವರ ಹೆಸರಿಗೆ ದಾವಾ ಆಸ್ತಿ ಬಂದ ಬಗ್ಗೆ ಎಂ ಆರ್ ಸಂಖ್ಯೆ 5/86-87 ನೇ ದರ ದೃಢೀಕೃತ ನಕಲನ್ನು ನಿಡಿ 31 ಎಂದು , ಎಂ ಆರ್ ಸಂಖ್ಯೆ 76 ರ ದಾಖಲೆಯನ್ನು ನಿಡಿ 32 ಎಂದು ಗುರುತಿಸಲಾಯಿತು.

ಮು. ಮುಖ್ಯ ವಿಚಾರಣೆಗಾಗಿ ವಕೀಲರು ಸಮಯ ಕೇಳಿದ್ದರಿಂದ ಮುಂದೂಡಲಾಗಿದೆ.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .